# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ಓ.ಎಸ್ ಸಂಖ್ಯೆ.2633/*2022***   ಪಿ.ಡಬ್ಲೂ .1

ದಿನಾಂಕಃ 15-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ** ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-

ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಮೊದಲನೇ ಹೆಂಡತಿ ಮುನಿಯಮ್ಮ ಎಂದರೆ ನಿಜ. ಸದರಿ ಮುನಿಯಮ್ಮನಿಗೆ ನಾನು ಒಬ್ಬಳೇ ಮಗಳು ಎಂದರೆ ಹೌದು. ನನ್ನ ತಂದೆಯ 2 ನೇ ಹೆಂಡತಿ ನಾಗಮ್ಮನಿಗೆ 6 ಜನ ಮಕ್ಕಳು ಎಂದರೆ ಸರಿಯಲ್ಲ. ಸದರಿ ನಾಗಮ್ಮ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾಗರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನನ್ನ ತಂದೆಗೆ ನನ್ನ ತಾಯಿ ಒಬ್ಬರೆ ಹೆಂಡತಿ ಎಂದು ನುಡಿಯುತ್ತಾರೆ. ನನ್ನ ಜನನ ದಿನಾಂಕ 15-01-1965 ಎಂದರೆ ಹೌದು.

ದಿನಾಂಕಃ 09-05-1962 ರಲ್ಲಿ ನನ್ನ ತಂದೆ ದಾವಾ ಐಟಂ ನಂ. 8 ರ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನಾನು ಹುಟ್ಟುವ ಪೂರ್ವದಲ್ಲಿಯೇ ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ. 8 ನನ್ನ ತಂದೆಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಹೌದು. ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಹೌದು. ಸದರಿ ಮಂಜೂರು ಆದೇಶದಂತೆ ದಾವಾ ಐಟಂ ನಂ 8 ರ ಖಾತೆ ನನ್ನ ತಂದೆ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೇ ಸರಿ. ಸದರಿ ಜಮೀನನ್ನು 09-05-1962 ರಂದು ವೆಂಕಟರಮಣಪ್ಪ @ ಬೋಟಿಗ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನ ಎಲ್ಲಾ ಭೂ ದಾಖಲೆಗಳು ವೆಂಕಟರಮಣಪ್ಪ @ ಬೋಟಿಗ ರವರ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ. 8 ರ ಆಸ್ತಿಯ ಖಾತೆ ನನ್ನ ತಂದೆಯ ಹೆಸರಿನಲ್ಲಿ 2012 ರ ಸಾಲಿನವರೆಗೆ ಇತ್ತು. ಆ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ನಾನು ಆ ರೀತಿ ದಾವಾ ಐಟಂ ನಂ. 8 ರ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 8 ರ ಆಸ್ತಿಯಲ್ಲಿ ನಾನು ಸ್ವಾ ದೀನಲ್ಲಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ. ದಿನಾಂಕಃ 23-08-2003 ರಂದು ನನ್ನ ತಂದೆ ಮರಣ ಹೊಂದಿರುತ್ತಾರೆ.ಆ ನಂತರ ದಾವಾ ಐಟಂ ನಂ. 8 ರ ಆಸ್ತಿಯ ಮಾಲೀಕರು ಎಂದು ಖಾತೆ ಬದಲಾವಣೆ ಮಾಡಲು ನಾನು ಅರ್ಜಿ ನೀಡಿಲ್ಲ. ವೆಂಕಟರಮಣಪ್ಪ @ ಬೋಟಿಗ ರವರ ಹೆಸರಿಗೆ ಆದ ಕ್ರಯದ ರದ್ದತಿಗೆ ನಾನಾಗಲಿ ಅಥವಾ ನನ್ನ ತಂದೆಯಾಗಲಿ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಗೊತ್ತಿಲ್ಲ. ಸದರಿ ವೆಂಕಟರಮಣಪ್ಪ @ ಬೋಟಿಗ ರವರಿಂದ ದಿನಾಂಕಃ 03-09-1982 ರಂದು 9 ನೇ

ಪ್ರತಿವಾದಿಗೆ ಐಟಂ ನಂ. 8 ರ ಆಸ್ತಿ ಕ್ರಯ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಕ್ರಯದ ದಿನಾಂಕದಿಂದ 9 ನೇ ಪ್ರತಿವಾದಿಯೇ ಸ್ವಾ ದೀನದಲ್ಲಿದ್ದಾರೆಂದರೆ ಸರಿಯಲ್ಲ. ನಾನು ಸ್ವಾ ದೀನದಲ್ಲಿದ್ದೇನೆ. ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. 9 ನೇ ಪ್ರತಿವಾದಿಗೆ ಆದ ಕ್ರಯವನ್ನು ವಜಾ ಮಾಡುವ ಬಗ್ಗೆ ನಾನು ಯಾವುದೇ ಕ್ರಮ ಕೈಗೊಂಡಿಲ್ಲ. ಅದೇ ರೀತಿ ಯಾವುದೇ ದಾವೆಯನ್ನು ಸಲ್ಲಿಸಿಲ್ಲ. ಸದರಿ ದಾವಾ ಐಟಂ ನಂ. 8 ರ ಆಸ್ತಿ ಮತ್ತು ಉಳಿದ ಒಟ್ಟು ಕುಟುಂಬದ ಆಸ್ತಿಗಳನ್ನು 9 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ನ್ಯಾಯಾಲಯದ ಮೂಲಕ ಭಾಗ ಮಾಡಿಕೊಂಡಿರುತ್ತಾರೆಂದರೆ ಗೊತ್ತಿಲ್ಲ. 9 ನೇ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ನಾನು ನೋಡಲ್ಲ. ಸದರಿ ತಕರಾರಿನಲ್ಲಿ 9 ನೇ ಪ್ರತಿವಾದಿ ಮತ್ತು ಅವರ ಸಹೋದರರು ದಾವಾ ಐಟದ ನಂ. 8 ರಲ್ಲಿ ಸ್ವಾದೀನದಲ್ಲಿರುವ ಬಗ್ಗೆ ಹೇಳಿದ್ದು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

9 ನೇ ಪ್ರತಿವಾದಿಯ ಹೆಸರಿಗೆ ದಾವಾ ಐಟಂ ನಂ. 8 ರ ಆಸ್ತಿ ಖಾತೆ 1982 ರಿಂದ ನಮೂದಾಗಿರುವ ವಿಚಾರ ಗೊತ್ತಿದ್ದರು ಸಹ ಕಾಲ ಮಿತಿಯಲ್ಲಿ ಪ್ರಶ್ನೇ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಮೇಲೆ 9 ನೇ ಪ್ರತಿವಾದಿ ಮತ್ತು ಆತನ ಅಣ್ಣತಮ್ಮಂದಿರು ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆಂದರೆ ಹೌದು. ಸದರಿ ಸಾಲ ಪಡೆಯುವ ಬಗ್ಗೆ ನಾನು ತಕರಾರು ಮಾಡಿಲ್ಲ.

ನನ್ನ ತಂದೆಗೆ ನಾಗಮ್ಮ ಎಂಬ 2 ನೇ ಹೆಂಡತಿ ಮತ್ತು ಅವರ ಮಕ್ಕಳಿದ್ದು ಅವರಿಗೂ ಸಹ ದಾವಾ ಆಸ್ತಿಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ಅವರನ್ನು ಪಕ್ಕಗಾರರನ್ನಾಗಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ಅದೇ ರೀತಿ ವೆಂಕಟರಮಣಪ್ಪ @ ಬೋಟಿಗ ರವರನ್ನು ಸಹ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹೌದು. ನಾನು ಸುಳ್ಳು ವಂಶ ವೃಕ್ಷವನ್ನು ನನಗೆ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸುಳ್ಳು. 9 ನೇ ಪ್ರತಿವಾದಿ ದಾವಾ ಐಟಂ ನಂ. 8 ರ ಆಸ್ತಿಗೆ ಯಾವುದೇ ತಕರಾರು ಅಥವಾ ಗಲಾಟೆ ಮಾಡಿಲ್ಲ. ಕೇಸು ಹಾಕಿರುತ್ತೇನೆ.

ಉಳಿದ ಪ್ರತಿವಾದಿಗಳು ಗೈರು ಹಾಜರು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.